**ಜೈನ್ ಕಾಲೇಜ್, ಜಯನಗರ.**

**ದ್ವಿತೀಯ ಪಿ.ಯು.ಸಿ –ಪೂರ್ವ ಸಿದ್ಧತಾ ಪರೀಕ್ಷೆಯ ಮಾದರಿ ಪ್ರಶ್ನೆಪತ್ರಿಕೆ –೧**

**ಸಮಯ : ೩.೧೫ ಗಂಟೆ** **ವಿಷಯ:– ಕನ್ನಡ** **ಅಂಕಗಳು–೧೦೦**

**ಅ–ವಿಭಾಗ**

**I ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ** **೧೦x೧=೧೦**

೧. ರಾವಣನ ಎದುರು ಪ್ರತ್ಯಕ್ಷವಾದ ವಿದ್ಯಾದೇವತೆ ಯಾರು?
೨. ತತ್ವಜ್ಞಾನವನ್ನು ಕೇಳದವರಾರು?
೩. ಮೊಮ್ಮಗಳು ಏನು ಮಾಡುತ್ತಿದ್ದಳು?
೪. ಕವಯಿತ್ರಿ ಯಾರಲ್ಲಿ ಮೊರೆ ಇಡುತ್ತಾರೆ?
೫. ಧಣಿಗಳ ಮನೆಯ ಪಕ್ಕದಲ್ಲಿ ಹರಿಯುತ್ತಿದ್ದ ಹೊಳೆ ಯಾವುದು?
೬. ಕಲಾಂ ಅವರು ಯಾವ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರೊಫೆಸರ್ ಆಗಿದ್ದರು?
೭. ಲೇಖಕರು ಹೇಳುವ ಹಳ್ಳಿಯ ಹೋಟೆಲಿನ ಹೆಸರೇನು?
೮. ನಿರೂಪಕರ ಕೊಡಲಿಯ ಆಕಾರ ಹೇಗಿತ್ತು?
೯. ಆನೆ ಯಾರ ಅಂಗಡಿಯನ್ನು ದೂಡಿ ಬೀಳಿಸಿತು?
೧೦. ಪುಟಯ್ಯ ಯಾರು?

**ಆ–ವಿಭಾಗ**

**II ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **೪x೨=೮**

೧೧. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?
೧೨. ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ? ಏಕೆ?
೧೩. ಮಗು ಏನೇನು ಕಲಿಯಿತು?
೧೪. ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ?
೧೫. ಆತ್ಮಕ್ಕೆ ಕುಮಟು ಹತ್ತುವುದು ಎಂದರೇನು?

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **೩x೨=೬**

೧೬. ಸಿದ್ಲಿಂಗಿ ಏಕೆ ರಾದ್ಧಾಂತ ಮಾಡಿದಳು?
೧೭. ಕೈಗಾರಿಕೋದ್ಯಮಿಗಳಿಂದ ಕಾಡು ನಾಶವಾದುದು ಹೇಗೆ?
೧೮. ಕಮಲ ಮೇಡಂ ವೈದ್ಯರ ಯಾವ ಸಲಹೆಯನ್ನು ರೂಢಿಸಿಕೊಂಡರು?
೧೯. ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು?

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **೩x೨=೬**

೨೦. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
೨೧. ಕಾಡಪ್ಪ ಶೆಟ್ಟರು ಯಾವ ವರ್ತಮಾನವನ್ನು ಮುಟ್ಟಿಸಿದರು?
೨೨. ನಿರೂಪಕರು ಕ್ಯಾಲಿಕ್ಯುಲೇಟರಿನಲ್ಲಿ ಲೆಕ್ಕಮಾಡಿ ಜಬ್ಬಾರ್‌ಗೆ ಏನೆಂದರು?
೨೩. ಡ್ರೈವರ್ ಅಬ್ಬಾಸ್, ಕ್ಲೀನರ್ ಕೃಷ್ಣರ ಸಾವಿಗೆ ಕಾರಣವೇನು?

**ಇ–ವಿಭಾಗ**

**III ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **೨x೩=೬**

೨೪. ತಾನೆ ಲಘು ಮಾಡಿ ಲಘುವಾದನಯ್ಯ.
೨೫. ಆಪತ್ತಿನೊಳ್ ಮಣಿದುಂ ನೋಡದ ಬಂಧುವೇತಕ್ಕೆ
೨೬. ಜ್ಯೋತಿ ನಿನ್ನ್ಯಾರ ಹೋಲರ.

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **೧x೩=೩**

೨೭. ಆಪರೇಷನ್ ಆಗಬೇಕು ಪರವಾಗಿಲ್ಲವಾ?
೨೮. ಇದೇ ಲೋಟವಲ್ಲವೇ.... ತನ್ನ ಬೆವರಿನ ಬೆಲೆ ಕಳೆದದ್ದು.

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಕುರಿತು ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **೧x೩=೩**

೨೯. ಅದನ್ನು ಸುತ್ತಿಗೆ ಎಂದು ಕರೆಯಬಹುದಿತ್ತು.
೩೦. ಆನೆ ಜೊತೆ ಮಲಗುತ್ತೀಯಾ; ನೀನ್ಯಾವ ಗಂಡಸು.

## ಈ–ವಿಭಾಗ

**ಖಗ ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **೩×೪=೧೨**

೩೧. ರಾವಣನು ಬಹುರೂಪಿಣೀ ವಿದ್ಯೆಯನ್ನು ಒಲಿಸಿಕೊಂಡ ಸಂದರ್ಭವನ್ನು ವಿವರವಾಗಿ ಬರೆಯಿರಿ.

೩೨. ತನಗಾದ ಅವಮಾನವನ್ನು ದ್ರೌಪದಿ ಭೀಮನಿಗೆ ಹೇಳಿಕೊಂಡ ಬಗೆಯನ್ನು ವಿವರಿಸಿ.

೩೩. ನಗರ ಜೀವನದ ಯಾಂತ್ರಿಕ ವಿವರಗಳು ಕವಿತೆಯಲ್ಲಿ ಹೇಗೆ ಚಿತ್ರಣಗೊಂಡಿದೆ? ವಿವರಿಸಿ.

೩೪. ಶಿಲುಬೆಗೇರಿದ ಜೀಸಸ್‌ನ ದೇಹ ಏನನ್ನು ಹೇಳುವಂತಿದೆ? ವಿವರಿಸಿ.

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **೨×೪=೮**

೩೫. ಪೋಷಕರು ಖಾಸಗಿ ಶಾಲೆಗಳ ಕಡೆ ಹೊರಳಲು ಲೇಖಕರು ಯಾವ ಕಾರಣಗಳನ್ನು ಉದಾಹರಿಸುತ್ತಾರೆ?

೩೬. ಕಲಾಂ ಅವರು ಯಾವಾಗಲೂ ಸಾಧ್ಯತೆಗಳನ್ನು ಅರಸುವ ಆಶಾಜೀವಿ ಹೇಗೆ? ವಿವರಿಸಿ.

೩೭. ಮುದ್ದಣ–ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ.

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **೨×೪=೮**

೩೮. ದುರ್ಗಪ್ಪ ನಿರೂಪಕರ ಬಳಿಗೆ ಬಂದ ಸಂದರ್ಭವನ್ನು ವಿವರಿಸಿ.

೩೯. ಎಲ್ಲರ ನಿರೀಕ್ಷೆ ಸುಳ್ಳಾಗುವಂತೆ ಕೃಷ್ಣೇಗೌಡ ಆನೆಯನ್ನು ಹೇಗೆ ಸಾಕಿದ.

೪೦. ಪುಟ್ಟಯ್ಯ ತನ್ನ ಅಸಹಾಯಕತೆಯನ್ನು ಹೇಗೆ ವಿವರಿಸಿದ್ದಾನೆ?

## ಉ–ವಿಭಾಗ

**ಗ ಅ. ಈ ಕೆಳಗಿನ ಪದ್ಯಗಳಿಗೆ ಭಾವಾರ್ಥ ಬರೆಯಿರಿ:** **೧×೫=೫**

೪೧. ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು ಪತಿಭಕ್ತಿಯೊಳಾ
ರೀ ವನಿತೆಯ ತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್

೪೨. ಮಂದೆಗೆಳೆಸಿದ ಪಾಪಿ ಕೌರವ
ನಂದು ಮುಂದಲೆವಿಡಿದು ಸೈಂಧವ
ಬಂದು ಬಳಿಕಾರಣ್ಯದೊಳೆನ್ನನೆಳದೊಯ್ದ
ಇಂದು ಕೀಚಕ ನಾಯ ಕಾಲಲಿ
ನೊಂದೆ ನಾನೀ ಮೂರು ಬಾರಿಯೆ
ಬಂದ ಭಂಗವೇ ಸಾಕೆನುತೆ ಬಸವಳಿದಳಿಂದುಮುಖಿ

**ಆ. ಭಾಷಾಭ್ಯಾಸ: ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :** **೬×೨=೧೨**

೪೩. **ಈ ಪದಗಳಿಗೆ ತತ್ಸಮ ತದ್ಭವ ಬರೆಯಿರಿ :** ಅಟವಿ, ವಿದ್ಯೆ

೪೪. **ಈ ಪದಗಳಿಗೆ ನಾನಾರ್ಥ ಬರೆಯಿರಿ:** ಕಲಿ, ಹೊಳೆ

೪೫. **ಈ ಕ್ರಿಯಾಪದಗಳ ಕಾಲ ತಿಳಿಸಿ** ಓಡಿದರು, ಬರುತ್ತಿದ್ದರು

೪೬. **ಈ ಪದಗಳ ವಿಭಕ್ತಿ ಪ್ರತ್ಯಯವನ್ನು ಬರೆಯಿರಿ:** ಧರೆಯೊಳ್, ಬೆಳಗಿಂದ

೪೭. **ಈ ದ್ವಿರುಕ್ತಿಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ:** ಕಟ್ಟಕಡೆಗೆ, ಮೆಲ್ಲಮೆಲ್ಲನೆ.

೪೮. **ಈ ಕೆಳಗಿನ ಪದಗಳಲ್ಲಿ ಅನ್ಯದೇಶ್ಯಗಳನ್ನು ಗುರ್ತಿಸಿ:**
ಹಾಲು, ರೈತ, ಮೈದಾನ, ಮೀನು, ಭರವಸೆ, ಸಾಬೂನು, ಮೊಸರು, ಸಾವಿರ

೪೯. **ಯಾವುದಾದರೂ ಎರಡು ರೂಢನಾಮಗಳನ್ನು ಬರೆಯಿರಿ:**

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಪ್ರಬಂಧ ಬರೆಯಿರಿ:** **೧×೫=೫**

೫೦. ಕೃಷಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಅತ್ಯಗತ್ಯ.

೫೧. ಐತಿಹಾಸಿಕ ಸ್ಥಳಗಳ ಸಂರಕ್ಷಣೆ.

**ಈ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಪತ್ರಲೇಖನ ಬರೆಯಿರಿ:** **೧×೪=೪**

೫೨. ನಿಮ್ಮ ಹುಟ್ಟು ಹಬ್ಬಕ್ಕೆ ಆಹ್ವಾನಿಸಿ ನಿಮ್ಮ ಗೆಳೆಯ/ತಿಗೆ ಪತ್ರ ಬರೆಯಿರಿ.

೫೩. ನಿಮ್ಮ ಬಡಾವಣೆಯ ಬೀದಿ ದೀಪಗಳ ದುರಸ್ಥಿ ಕುರಿತು ಬೆಸ್ಕಾಂನ ಅಭಿಯಂತರರಿಗೊಂದು ಪತ್ರ ಬರೆಯಿರಿ

**ಉ. ಈ ಕೆಳಗಿನ ಗಾದೆಗಳನ್ನು ವಿಸ್ತರಿಸಿ ಬರೆಯಿರಿ** **೧×೪=೪**

೫೪. ದೇಶ ಸುತ್ತುಬೇಕು, ಕೋಶ ಓದಬೇಕು.

೫೫. ಉತ್ಸಾಹವೇ ಯೌವನ, ಚಿಂತೆಯೇ ಮುಪ್ಪು

* * *

**ಜೈನ್ ಕಾಲೇಜ್, ಜಯನಗರ.**

**ದ್ವಿತೀಯ ಪಿ.ಯು.ಸಿ –ಪೂರ್ವ ಸಿದ್ಧತಾ ಪರೀಕ್ಷೆಯ ಮಾದರಿ ಪ್ರಶ್ನೆಪತ್ರಿಕೆ –೨**

**ಸಮಯ : ೩.೧೫ ಗಂಟೆ** | **ವಿಷಯ:– ಕನ್ನಡ** | **ಅಂಕಗಳು–೧೦೦**

## ಅ–ವಿಭಾಗ

**ಖ ಅ. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** **೧೦ಥಾ=೧೦**

೧. ಉರಿಲಿಂಗಪೆದ್ದಿಯ ವಚನಗಳ ಅಂಕಿತ ಯಾವುದು?
೨. ನಿಷ್ಪ್ರಯೋಜಕ ಮಗ ಯಾರು?
೩. ಏನು ಬಂದೇ ತೀರುತ್ತದೆ ಎಂಬ ನಂಬಿಕೆಯಲ್ಲಿ ಜೀಸಸ್ ಶಿಲುಬೆ ಏರಿದ್ದಾನೆ?
೪. ಹತ್ತಿಯ ಬೀಜಕ್ಕೆ ಯಾವುದು ತಪ್ಪದ ಕರ್ಮ?
೫. ಡಾ॥ ತಿಮ್ಮಪ್ಪ ಬಸಲಿಂಗನಿಗೆ ಯಾವ ವೈದ್ಯರನ್ನು ಕಾಣಬೇಕೆಂದು ಸೂಚಿಸಿದರು?
೬. 'ಕಿಡ್ನಿಸ್ಟೋನ್' ಬಗ್ಗೆ ತಿಳಿಯಲು ಲೇಖಕಿ ಯಾರನ್ನು ಭೇಟಿ ಮಾಡಿದರು?
೭. ಕಲಾಂ ಅವರ ಆತ್ಮಚರಿತ್ರೆಯ ಹೆಸರೇನು?
೮. ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು?
೯. ಆನೆಗೆ ಜಗದ್ಗುರುಗಳನ್ನು ಹೊರುವ ಕೆಲಸ ತಪ್ಪಿಹೋದುದೇಕೆ?
೧೦. ಟೆಲಿಫೋನ್ ಕಂಬದ ಮೇಲೆ ಮೃತನಾದ ಲೈನ್‌ಮನ್ ಯಾರು?

## ಆ–ವಿಭಾಗ

**ಖಖ ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **೪ಥ೨=೮**

೧೧. ರಾವಣ ತನ್ನ ಅಂತಃಪುರದ ಸ್ತ್ರೀಯರನ್ನು ಹೇಗೆ ಸಂತೈಸಿದನು?
೧೨. ಯಾರಿಗೆ ತತ್ವಜ್ಞಾನ ಹೇಳಿ ಪ್ರಯೋಜನವಿಲ್ಲ?
೧೩. ತಂದೆ ಮಗುವಿಗೆ ಕಾಣಿಸಿಕೊಳ್ಳುವ ಬಗೆ ಹೇಗೆ?
೧೪. ಮುದುಕಿಯು ಯಾರನ್ನು ಏನೆಂದು ಪ್ರಾರ್ಥಿಸುವಳು?
೧೫. ಜನರನ್ನು ಕವಯಿತ್ರಿ ಯಾವ ಯಾವುದರಿಂದ ಪಾರು ಮಾಡುವುದಾಗಿ ಹೇಳಿದ್ದಾರೆ?

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **೩ಥ೨=೬**

೧೬. ಬ್ರಿಟಿಷರು ಬರುವ ಮೊದಲು ವಾಲ್‌ಪರ್ಶೈ ಹೇಗಿತ್ತು?
೧೭. ಕುಂಡದಲ್ಲಿ ನೆಟ್ಟ ಗಿಡಗಳ ಸ್ಥಿತಿ ಹೇಗಿರುತ್ತದೆ?
೧೮. ನದಿಯ ಒಡಲು ಯಾವಾಗ ಪ್ರಕ್ಷುಬ್ಧವಾಗಿರುತ್ತದೆ?
೧೯. ಹಳ್ಳಿಗರ ಆಕ್ಷೇಪದ ವಿಷಯ ಯಾವುದು?

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯದಲ್ಲಿ ಉತ್ತರಿಸಿ :** **೩ಥ೨=೬**

೨೦. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆ ಹೇಗೆ?
೨೧. ನಾಗರಾಜ ದುರ್ಗಪ್ಪನ ಮೇಲೆ ಏನೆಂದು ರೇಗಿದನು?
೨೨. ಹುಚ್ಚು ನಾಯಿಗಳು ಆಸ್ಪತ್ರೆಯಲ್ಲಿ ಹೇಗೆ ವರ್ತಿಸುತ್ತವೆಂದು ಪುಟ್ಟಯ್ಯ ಹೇಳಿದನು?
೨೩. ಅರಣ್ಯ ಇಲಾಖೆಯವರು ನಾಗರಾಜನನ್ನು ಕುರಿತು ಏನೆಂದು ಜಾಹೀರಾತು ನೀಡಿದರು?

## ಇ–ವಿಭಾಗ

**ಖಖಖ ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **೨ಥ೩=೬**

೨೪. ಏನಂ ಕೇಳ್ದಪೆನೋ....ಪೊಲ್ಲವಾರ್ತೆಯನಿನ್
೨೫. ತುಂಬಿರುವ ತನಕ ತುಂತುಂಬಿ ಕುಡಿಯಬೇಕು.
೨೬. ಇನ್ನೊಂದು ಸೇರ್ಪಡೆ ಆ ಲೀಲಾಮಾತ್ರನಿಗೆ.

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **೧ಥ೩=೩**

೨೭. ನಾವು ಪರದೇಶಿಗಳೆಂಬ ಭಾವನೆ ಬರುತ್ತದೆ.
೨೮. ಕಬ್ಬಮಂ ಕಂಡಲ್ತೆ ಕಚ್ಚಳಿಯನಿತ್ತರ್.

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ:** **೧ಥ೩=೩**

೨೯. ಜಗದ್ಗುರುಗಳು ಯಾವ ಧೈರ್ಯದ ಮೇಲೆ ಇವರ ಮೇಲೆ ಕುಳಿತುಕೊಳ್ಳುತ್ತಿದ್ದರೋ!
೩೦. ಹೊರಗಡೆಯಿಂದ ಎಕ್ಸ್‌ಪೋರ್ಟ್ ಆದವು.

## ಈ–ವಿಭಾಗ

**IV ಅ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **೩×೪=೧೨**

೩೧. ದ್ರೌಪದಿ ಅವಮಾನಕ್ಕೊಳಗಾದ ಮೂರು ಪ್ರಸಂಗಗಳನ್ನು ವಿವರಿಸಿ.

೩೨. ಜಾಲಿಯ ಮರವು ನಿರುಪಯುಕ್ತವೆಂಬುದನ್ನು ಪುರಂದರದಾಸರು ಹೇಗೆ ನಿರೂಪಿಸಿದ್ದಾರೆ?

೩೩. ಬಾಳಿನ ಆಶಾಶ್ವತತೆ ಮತ್ತು ಪ್ರಕೃತಿಯ ನಿತ್ಯನೂತನತೆಯ ಗುಣವನ್ನು ಬೆಳಗು ಜಾವ ಕವನದಲ್ಲಿ ಕವಿ ಹೇಗೆ ವಿವರಿಸಿದ್ದಾರೆ?

೩೪. ಹತ್ತಿಯ ಬೀಜದ ಮತ್ತು ಮಾನವ ಜೀವನದ ಪಯಣವನ್ನು ಕವಿ ಹೇಗೆ ಸಮೀಕರಿಸಿದ್ದಾರೆ?

**ಆ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **೨×೪=೮**

೩೫. ಬಸಲಿಂಗ ಡಾ॥ ತಿಮ್ಮಪ್ಪನವರ ಸೂಚನೆಗಳನ್ನು ಪಾಲಿಸದೆ ಇರಲು ಕಾರಣವೇನು?

೩೬. ಬೆಳ್ಳಿಲೋಟ ಕಂಡಾಗ ಧಣಿಯಲ್ಲಿ ಆತಂಕ, ಗಾಬರಿ, ಭಯ ಉಂಟಾಗಲು ಕಾರಣವೇನು?

೩೭. ಮುದ್ದಣ ಅರಮನೆಯಿಂದ ಬಂದ ಪರಿಯನ್ನೂ ಮನೋರಮೆಯ ಉಪಚಾರವನ್ನೂ ವಿವರಿಸಿ.

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ :** **೨×೪=೮**

೩೮. ಕೃಷ್ಣೇಗೌಡರ ಆನೆ ಹುಟ್ಟಿ ಬೆಳೆದ ಬಗೆಯನ್ನು ವಿವರಿಸಿ. ಅದು ಪೇಟೆಯಲ್ಲಿ ಏನು ಮಾಡುತ್ತಿತ್ತು?

೩೯. ಡ್ರೈವರ್ ಸಾವಿನ ಸುದ್ದಿಯನ್ನು ಶಿವೇಗೌಡ ಮತ್ತಿತರರು ಹೇಗೆ ಮುಚ್ಚಿಹಾಕಿದರು?

೪೦. ವೇಲಾಯುಧನ ಹೆಂಡತಿಗೆ ಆನೆಯ ಬಗ್ಗೆ ಸವತಿ ಮಾತ್ಸರ್ಯ ಮೂಡಲು ಕಾರಣಗಳೇನು?

## ಉ–ವಿಭಾಗ

**V ಅ. ಈ ಕೆಳಗಿನ ಪದ್ಯಕ್ಕೆ ಭಾವಾರ್ಥ ಬರೆಯಿರಿ:** **೧×೫=೫**

೪೧. ಒಲೆಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆಹತ್ತಿ ಉರಿದಡೆ ನಿಲಲುಬಾರದು
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವಡೆ
ನಾರಿ ತನ್ನ ಮನೆಯಲಿ ಕಳುವಡೆ
ತಾಯ ಮೊಲೆಹಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲ ಸಂಗಮದೇವಾ

೪೨. ಚಿಗುರೆಂದು ಮೆಲೆ ಬೇವು ಸ್ವಾದವಹುದೇ ಚೇಳ್ ಚಿಕ್ಕದೆಂದಳ್ಕರಿಂ
ತೆಗೆಯಲ್ ಕಚ್ಚದೆ ಪಾಲನೂಡಿ ಫಣಿಯಂ ಸಾಕಲ್ಕೆ ವಿಶ್ವಾಸಿಯೇ
ಖಗಮಂ ಸಾಕುವೆನೆಂದು ಗೂಗೆಮರಿಯಂ ಸಂಪ್ರೀತಿಯಿಂದೋವರೇ
ಪಗೆಯಂ ಬಾಲಕನೆಂಬರೆ ಹರಾಹರಾ ಶ್ರೀ ಚೆನ್ನಸೋಮೇಶ್ವರಾ

**ಆ. ಭಾಷಾಭ್ಯಾಸ: ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಸೂಚನೆಯಂತೆ ಉತ್ತರಿಸಿ :** **೬×೨=೧೨**

೪೩. **ಈ ಪದಗಳ ಅರ್ಥ ಬರೆಯಿರಿ :** ತೃಣ, ಆಜ್ಯ.

೪೪. **ಈ ಪದಗಳಿಗೆ ಸಮಾನಾರ್ಥಗಳನ್ನು ಬರೆಯಿರಿ:** ಮರ್ಕಟ, ಪುಷ್ಪ

೪೫. **ಈ ಪದಗಳ ಗುಣವಾಚಕಗಳನ್ನು ತಿಳಿಸಿ:** ದುರ್ಜನ, ಎಡಗಣ್ಣು

೪೬. **ಈ ಕ್ರಿಯಾಧಾತುಗಳ ನಿಶೇಧರೂಪವನ್ನು ಬರೆಯಿರಿ:** ತೊರೆ, ಕೇಳು

೪೭. **ಈ ದ್ವಿರುಕ್ತಿಗಳನ್ನು ಸ್ವಂತವಾಕ್ಯದಲ್ಲಿ ಬಳಸಿರಿ:** ಹಂತಹಂತ, ಜೊತೆಜೊತೆಗೆ

೪೮. **ಈ ಪದಗಳ ವಿಭಕ್ತಿಪ್ರತ್ಯಯವನ್ನು ಬರೆಯಿರಿ:** ಹರೆಯಕ್ಕೆ, ಗದ್ಯದೊಳ್

೪೯. ಯಾವುದಾದರೂ ಎರಡು ನಾಮವಾಚಕಗಳನ್ನು ಬರೆಯಿರಿ:

**ಇ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಪ್ರಬಂಧ ಬರೆಯಿರಿ:** **೧×೫=೫**

೫೦. ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವ.

೫೧. ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆ.

**ಈ. ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಪತ್ರಲೇಖನ ಬರೆಯಿರಿ:** **೧×೪=೪**

೫೨. ಒಂದು ವಾರಗಳ ರಜೆಯನ್ನು ಕೋರಿ ನಿಮ್ಮ ಪ್ರಾಂಶುಪಾಲರಿಗೊಂದು ಪತ್ರ ಬರೆಯಿರಿ.

೫೩. ನಿಮ್ಮ ಊರಿಗೆ ಗ್ರಂಥಾಲಯ ಸೌಲಭ್ಯವನ್ನು ಕಲ್ಪಿಸುವಂತೆ ಕೋರಿ ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆಯಿರಿ.

**ಉ. ಈ ಕೆಳಗಿನ ಗಾದೆಗಳನ್ನು ವಿಸ್ತರಿಸಿ.** **೧×೪=೪**

೫೪. ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ.

೫೫. ಮಾತು ಆಡಿದರೆ ಹೋಯ್ತು, ಮುತ್ತು ಒಡೆದರೆ ಹೋಯ್ತು.

*******